ಈ ಮೇಲ್ಕಾಣಿಸಿದ ಯೋಜನೆಗಳಡಿ ನಿಗಮವು ಪ್ರಾರಂಭವಾದಾಗಿನಿಂದ ಈವರೆಗೆ ಗ್ರಾಮೀಣ ಪ್ರದೇಶದಲ್ಲಿ 82043 ಹಾಗೂ ನಗರ ಪ್ರದೇಶದಲ್ಲಿ 55876 ನಿವೇಶನಗಳನ್ನು ವಿತರಿಸಲಾಗಿದೆ.

ರಾಜ್ಯದಲ್ಲಿರುವ ಪುರಸಭೆಗಳಿಗೆ ಅನುದಾನ ನೀಡುವ ಬಗ್ಗೆ

383 (462) ಶ್ರೀ ದಿನಕರ ಕೇಶವ ಶೆಟ್ಟಿ (ಕುಮಟ) ಮಾನ್ಯ ನಗರಾಭಿವೃದ್ಧಿ, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು ಹಾಗೂ ಬೆಂಗಳೂರು ಜಲ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪುರಸಭೆಗಳಿಗೆ ಕಳೆದ ಎರಡು ವರ್ಷಗಳಿಂದ ರೂ. 5.00 ಕೋಟಿಗಳ ಅನುದಾನವನ್ನು ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಗ್ರಾಮ ಪಂಚಾಯತಿಯಷ್ಟು ವಿಸ್ತಾರ ಹೊಂದಿರುವ ಪುರಸಭೆಗೂ ಇದೇ ಅನುದಾನವನ್ನು ವಿಸ್ತರಿಸಲಾಗಿದೆಯೇ; (ಮಾಹಿತಿ ನೀಡುವುದು)

ಇ) ಪುರಸಭೆಗಳಿಗೆ ನೀಡುವ ಅನುದಾನಕ್ಕೂ ಆಯಾ ಕ್ಷೇತ್ರದ ಶಾಸಕರಿಗೂ ಸಂಬಂಧವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಳ್ಳುವ ಕ್ರಮಗಳೇನು?

ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು ಹಾಗೂ ಬೆಂಗಳೂರು ಜಲ ಮಂಡಳಿ ಸಚಿವರು)

ಅ) ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಿಗೆ ಮುಖ್ಯಮಂತ್ರಿಗಳ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಅಭಿವೃದ್ಧಿ ಯೋಜನೆಯಲ್ಲಿ 2 ವರ್ಷಗಳ ಅವಧಿಗೆ 2009–10 ರಿಂದ ಅನುದಾನವನ್ನು ಈ ಕೆಳಕಂಡಂತೆ ಬಿಡುಗಡೆ ಮಾಡಲಾಗುತ್ತಿದೆ.

1) ರೂ. 30.00 ಕೋಟಿ – ಜಿಲ್ಲಾ ಕೇಂದ್ರ ನಗರಸಭೆಗಳಿಗೆ.

2) ರೂ. 5.00 ಕೋಟಿ – ತಾಲ್ಲೂಕು ಕೇಂದ್ರ ಪಟ್ಟಣಗಳಿಗೆ

3) ರೂ. 2.00 ಕೋಟಿ – ಇತರೆ ಪಟ್ಟಣಗಳಿಗೆ.

ಈ ಯೋಜನೆಯ ಒಟ್ಟು ಅನುದಾನ ರೂ. 1454.00 ಕೋಟಿಗಳಾಗಿದ್ದು, ಸರ್ಕಾರದ ಆದೇಶ ಸಂಖ್ಯೆ: ನಅಇ 16 ಐಎಸ್‌ಟಿ 09, ದಿನಾಂಕ 24-6-2009ರನ್ವಯ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಆ) ಈ ಯೋಜನೆಯು ನಗರ ಸ್ಥಳೀಯ ಸಂಸ್ಥೆಗಳಿಗೆ ಮಾತ್ರ ಸೀಮಿತವಾಗಿರುತ್ತದೆ.

ಕರ್ನಾಟಕ ಪೌರ ಸಭೆಗಳ ಅಧಿನಿಯಮ 1964ರ ಕಲಂ-349 ರಂತೆ ಯಾವುದೇ ಒಂದು ಪ್ರದೇಶವು ನಗರ ಸ್ಥಳೀಯ ಸಂಸ್ಥೆಯೆಂದು ಪರಿಗಣಿಸಲು/ಘೋಷಿಸಲ್ಪಡಲು ಕೆಲವು ನಿಬಂಧನೆ/ಮಾನದಂಡಗಳನ್ನು ಪೂರೈಸಬೇಕಾಗಿರುತ್ತದೆ.

ಆದರಂತೆ, ಕನಿಷ್ಟ ನಗರ ಪ್ರದೇಶವಾದ ಪಟ್ಟಣ ಪಂಚಾಯಿತಿಯ ವ್ಯಾಪ್ತಿಯಲ್ಲಿನ ಜನಸಂಖ್ಯೆಯ 10,000ಕ್ಕೆ ಮೇಲ್ಪಟ್ಟು ಮತ್ತು 20,000 ಒಳಗೆ ಇರತಕ್ಕದ್ದು.

ಅದರಂತೆ ಪುರಸಭೆ ವ್ಯಾಪ್ತಿಯಲ್ಲಿ ಜನಸಂಖ್ಯೆಯು 20,000ಕ್ಕೆ ಮೇಲ್ಪಟ್ಟು 50,000 ಒಳಗೆ ಇರತಕ್ಕದ್ದು.

ಈ ಪ್ರದೇಶದ ಜನ ಸಾಂದ್ರತೆ 1 ಕಿ.ಮೀ. ವಿಸ್ತೀರ್ಣಕ್ಕೆ 400 ನಿವಾಸಿಗಳಷ್ಟು ಇರಬೇಕಾಗಿರುತ್ತದೆ ಹಾಗೂ ಒಟ್ಟು ಉದ್ಯೋಗಿಗಳ ಪೈಕಿ ಶೇ. 50.00ರಷ್ಟು ಕೃಷಿಯೇತರ ಚಟುವಟಿಕೆಯ ಉದ್ಯೋಗಿಗಳು ಇರಬೇಕಾಗಿರುತ್ತದೆ.

ಇ) ಸರ್ಕಾರದ ಆದೇಶ ಸಂಖ್ಯೆ: ನಅಇ 16 ಐಎಸ್‌ಟಿ 2009, ದಿನಾಂಕ 24-6-2009ರಂತೆ ಯೋಜನೆಯ ಕರಡು ಕ್ರಿಯಾ ಯೋಜನೆಯ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಅನುಮೋದಿಸುವ ಸಂದರ್ಭದಲ್ಲಿ ಸಂಬಂಧಿಸಿದ ವಿಧಾನ ಸಭಾ / ವಿಧಾನ ಪರಿಷತ್ ಸದಸ್ಯರ ಸಲಹೆ / ಅಭಿಪ್ರಾಯವನ್ನು ಪರಿಗಣಿಸಲು ಸೂಚಿಸಿರುತ್ತದೆ.

ಈ) ಉದ್ಭವಿಸುವುದಿಲ್ಲ.

ಮೂಲಭೂತ ಸೆಸ್ ಹಣ ಕುರಿತು

388 (739) ಶ್ರೀ ಕೆ.ಜೆ. ಜಾರ್ಜ್ (ಸರ್ವಜ್ಞನಗರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?